




ಕೈಗಾರಿಕಾ ಕ್ರಾಂತಿಯನ್ನು ಸದುಪಯೋಗ ಪಡಿಸಿಕೊಂಡ ಪಾಶ್ಚಿಮಾತ್ಯ ರಾಷ್ಟ್ರಗಳು ಕೈಗಾರಿಕಾ ರಂಗದಲ್ಲಿ ಮುನ್ನಡೆಯುತ್ತಿರುವುದನ್ನು ಗಮನಿಸಿದ್ದ ವಿಶ್ವೇಶ್ವರಯ್ಯನವರು, ಬೇಸಾಯವೇ ಪ್ರಧಾನವಾಗಿದ್ದ ಭಾರತಕ್ಕೆ 'ಕೈಗಾರೀಕರಣ ಇಲ್ಲವೇ ವಿನಾಶ' ಎಂದೇ ಘೋಷಿಸಿದರು.

ಆಗಿನ್ನೂ ಬ್ರಿಟಿಷರ ಆಳ್ವಿಕೆ ಇದ್ದ ಸಮಯ. ಬ್ರಿಟಿಷರಿಂದ ಎಂ.ವಿ. ಅವರ ಚಿಂತನೆಗಳಿಗೆ ಬೆಂಬಲ ಸಿಗಲಿಲ್ಲ. ಗ್ರಾಮೋದ್ಯೋಗ ಪ್ರತಿಪಾದಕರಾಗಿದ್ದ ಮಹಾತ್ಮಗಾಂಧಿ ಅವರಂತಹ ನಾಯಕರ ಸಹಮತವೂ ದೊರೆಯಲಿಲ್ಲ. ವಿಶ್ವೇಶ್ವರಯ್ಯನವರು ಎದೆಗುಂದಲಿಲ್ಲ. ಆ ವೇಳೆಗಾಗಲೇ ಮೈಸೂರು ಸಂಸ್ಥಾನದ ಪ್ರಧಾನ ಎಂಜಿನಿಯರ್ ಆಗಿದ್ದ ಅವರು, ನಾಲ್ವಡಿ ಕೃಷ್ಣರಾಜರ ಬೆಂಬಲದೊಂದಿಗೆ ಕರ್ನಾಟಕದಲ್ಲಿ ಅನೇಕ ಕೈಗಾರಿಕೆಗಳನ್ನು ಹುಟ್ಟುಹಾಕಿದರು.

ಶ್ರೀಗಂಧದ ಮರಗಳು ಯಥೇಚ್ಛವಾಗಿದ್ದ ಆ ದಿನಗಳಲ್ಲಿ ಶ್ರೀಗಂಧದ ಎಣ್ಣೆ ತೆಗೆಯುವ ಕಾರ್ಖಾನೆ ಶುರುವಾಯಿತು. ಶ್ರೀಗಂಧದ ಎಣ್ಣೆಯಿಂದ ಸುಗಂಧ ದ್ರವ್ಯ ಮಾತ್ರವಲ್ಲ, 'ಮೈಸೂರು ಸ್ಯಾಂಡಲ್' ಬ್ರ್ಯಾಂಡ್‌ನ ಸಾಬೂನು ಮತ್ತು ಅಗರಬತ್ತಿ ದೇಶದ ಗಮನ ಸೆಳೆದಿದ್ದು ಈಗ ಇತಿಹಾಸ. ಮೈಸೂರು ಸಂಸ್ಥಾನದಲ್ಲಿ ಔದ್ಯಮಿಕ ಕ್ಷೇತ್ರ ಹಸನಾಗಲು ಅನುಕೂಲವಾಗುವಂತಹ ಔದ್ಯೋಗೀಕರಣ ಸ್ನೇಹಿ ಕೈಗಾರಿಕಾ ನೀತಿಯನ್ನು ಸರ್ಕಾರ ರೂಪಿಸಲು ಬುನಾದಿ ಹಾಕಿಕೊಟ್ಟ ಕೀರ್ತಿ ವಿಶ್ವೇಶ್ವರಯ್ಯ ಅವರಿಗೆ ಸಲ್ಲಬೇಕು.

ಬೆಂಗಳೂರಿನಲ್ಲಿ 'ಹಿಂದೂಸ್ತಾನ್ ವಿಮಾನ ಕಾರ್ಖಾನೆ' ಸ್ಥಾಪನೆಗೆ ಮಹಾರಾಜರ ಮನ ಒಲಿಸಿದವರೂ ಅವರೇ. ಸರ್ಕಾರವೇ ಕೆಲವು ಕಾರ್ಖಾನೆಗಳ ಸ್ಥಾಪನೆಗೆ ಮುಂದಾಗುವಂತೆ ಮಾಡಿದ ಅವರು, ಖಾಸಗಿಯವರೂ ಕೈಗಾರಿಕೆಗಳನ್ನು ಆರಂಭಿಸಲು ನೆರವು ನೀಡಿದ್ದು ಗಮನಾರ್ಹ ಸಂಗತಿ.

ಜೋಗ ಜಲಪಾತ ಯಾರನ್ನಾದರೂ ಸೂಜಿಗಲ್ಲಿನಂತೆ ಸೆಳೆಯುವ ಮೋಹಕ ಜಲಪಾತ. ಆದರೆ ಜೋಗ ಜಲಪಾತ ನೋಡಿದ ಕೂಡಲೇ ಸರ್. ಎಂ.ವಿ. ಅವರ ಉದ್ಗಾರ – 'ವಾಟ್ ಎ ವೇಸ್ಟ್'. ಈ ಮಾತೇ, ಜಲ ವಿದ್ಯುತ್ ತಯಾರಿಕೆಗೆ ಕಾರಣವಾಯಿತೆಂಬುದು ಮುಂದಿನ ಸಂಗತಿ.

ಕರ್ನಾಟಕದುದ್ದಕ್ಕೂ ಇರುವ ನೈಸರ್ಗಿಕ ಸಂಪನ್ಮೂಲಗಳ ಸಮೀಕ್ಷೆಗೆ ತಮ್ಮ ಅಧಿಕಾರಾವಧಿಯಲ್ಲೇ ಆದೇಶ ಕೊಟ್ಟ ಅವರು ಸಮೀಕ್ಷೆಗೆ ಅನುಗುಣವಾಗಿ ಆರಂಭಿಸಿದ ಕೈಗಾರಿಕೆಗಳು ಹತ್ತಾರು. ನಾಡಿನಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಉದ್ಯೋಗಗಳು ದೊರೆಯಬೇಕೆಂಬ ಮುಖ್ಯ ಉದ್ದೇಶದಿಂದ, ಅನೇಕ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ತೆರೆದ ಅವರ ದೂರದೃಷ್ಟಿಯಿಂದಾಗಿ ಮೈಸೂರಿನಲ್ಲಿ ಇಂಡಸ್ಟ್ರಿಯಲ್ ಶಾಲೆ, ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಕಾಲೇಜು ಆರಂಭವಾದವು.

ವಿಶ್ವೇಶ್ವರಯ್ಯನವರ ಜನ್ಮದಿನವನ್ನು (ಸೆಪ್ಟೆಂಬರ್ 15) 'ರಾಷ್ಟ್ರೀಯ ಎಂಜಿನಿಯರ್ ದಿನ'ವನ್ನಾಗಿ ಆಚರಿಸಲಾಗುತ್ತದೆ. ಆದರೆ, ಅವರ ಸೇವೆ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸೀಮಿತವಾಗದೆ, ಗ್ರಂಥಾಲಯ, ನೀರು ಸರಬರಾಜು ಯೋಜನೆ, ಅಣೆಕಟ್ಟು ನಿರ್ಮಾಣ, ಶಿಕ್ಷಣ ಸೇರಿದಂತೆ ಅನೇಕ ಕ್ಷೇತ್ರಗಳಿಗೆ ಸಂದಿದೆ.

ಭಾರತ ಸರ್ಕಾರದ 'ಭಾರತ ರತ್ನ', ಬ್ರಿಟಿಷ್ ಸರ್ಕಾರದ 'ಸರ್' ಗೌರವ ಸೇರಿದಂತೆ ವಿಶ್ವೇಶ್ವರಯ್ಯ ಅವರ ಸಾಧನೆಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ.

ನೂರು ವರ್ಷಗಳ ಕಾಲ ಜೀವಿಸಿದ ಮೋಕ್ಷಗೊಂಡಂ ವಿಶ್ವೇಶ್ವರಯ್ಯನವರ ಗೌರವಾರ್ಥ ಅಂಚೆ ಇಲಾಖೆ ಶತಮಾನೋತ್ಸವ ಅಂಚೆ ಚೀಟಿಯನ್ನು ಹೊರತಂದಿದೆ. ತಮ್ಮ ಶತಮಾನೋತ್ಸವ ಅಂಚೆ ಚೀಟಿಯನ್ನು ವಿಶ್ವೇಶ್ವರಯ್ಯನವರು ತಾವೇ ಬಿಡುಗಡೆ ಮಾಡಿದ್ದು ಕೂಡ ಒಂದು ದಾಖಲೆಯೇ.

ಪ್ರತಿಕ್ರಿಯಿಸಿ: feedback@sudha.co.in

